ದಿನಾಂಕಃ**13.10.2025** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀಸವಾಲು ವಾದಿ ಪರ ಶ್ರೀ ಬಿ ಎ ಎಸ್ ವಕೀಲರಿಂದಃ**

ನಿಡಿ1 ಕ್ಕೆ ಶೇಖರೇಗೌಡ, ಮಧುಗಿರಿಕೊಪ್ಪಲು ಮತ್ತು ಮಂಜುನಾಥ್, ಹುಣಸೂರು ಇವರು ಸಾಕ್ಷಿದಾರರಾಗಿದ್ದಾರೆ. ನನಗೆ ಪತ್ರ ಬರೆಯುವ 2 ವರ್ಷದ ಹಿಂದೆ ಅವರ ಪರಿಚಯ ಇರುತ್ತದೆ. ನೀವು ಸಾಕ್ಷಿದಾರರಿಗೆ ಎಷ್ಟು ದಿನದ ಹಿಂದೆ ನಿಡಿ1 ರ ಬಗ್ಗೆ ತಿಳಿಸಿದ್ದೀರಿ ಎಂದರೆ ಸಾಕ್ಷಿ ಅವರು ತಾಲ್ಲೂಕು ಕಛೇರಿಯಲ್ಲೇ ಇರುತ್ತಾರೆ ಎಂದು ಉತ್ತರಿಸುತ್ತಾರೆ. ಪತ್ರ ಬರೆಯುವ ದಿನವೇ ನಾನು ಸಾಕ್ಷಿದಾರರಿಗೆ ತಿಳಿಸಿದ್ದೆ. ಅವರನ್ನು ಸಾಕ್ಷಿದಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಮ್ಮ ತಂದೆಗೆ ಚಿಕ್ಕಬೀಚನಹಳ್ಳಿಯ ಸರ್ವೆ ನಂ.18 ಮತ್ತು ಸರ್ವೆ ನಂ.160 ರಲ್ಲಿ ಜಮೀನು ಇತ್ತು. ಇನ್ನೊಂದು ಆಸ್ತಿ ಇರುತ್ತದೆ, ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಮಾರಾಟ ಮಾಡುವ ಕಾಲಕ್ಕೆ ಮೇಲ್ಕಂಡ ಆಸ್ತಿಗಳು ಕರಿಗೌಡರವರ ಹೆಸರಿನಲ್ಲಿತ್ತು. ಅವರ ಹೆಸರಿನಲ್ಲಿ ಆಸ್ತಿ ಇದ್ದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಕರಿಗೌಡರವರು ಸರ್ವೆ ನಂ.18 ನ್ನು ಸಿದ್ದರಾಮೇಗೌಡರವರಿಗೆ ಮಾರಾಟ ಮಾಡಿರುತ್ತಾರೆ. ನಂತರ ಸಿದ್ದರಾಮೇಗೌಡರವರು ಕಾಳೇಗೌಡರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈಗ ಖಾತೆ ಯಾರ ಹೆಸರಿನಲ್ಲಿದೆ ಎಂದು ತೋರಿಸಲು ಪಹಣಿಗಳನ್ನು ಹಾಜರುಪಡಿಸಿರುವುದಿಲ್ಲ, ಸಾಕ್ಷಿ ಮುಂದುವರಿದು ಹಾಜರುಪಡಿಸುತ್ತೇನೆ. ಮೇಲ್ಕಂಡ ಆಸ್ತಿಗಳು ಮೂಲತಃ ನನ್ನ ತಂದೆಯಾದ ಚಿಕ್ಕೇಗೌಡರವರಿಗೆ ಸೇರಿದ ಆಸ್ತಿಗಳು. ಚಿಕ್ಕೇಗೌಡರವರಿಗೆ ಯಾವ ರೀತಿ ಆಸ್ತಿಗಳು ಬಂದಿವೆ ಎಂದರೆ ಸಾಕ್ಷಿ ಅವರ ಅಣ್ಣತಮ್ಮಂದಿರು ಭಾಗ ಮಾಡಿಕೊಂಡಿದ್ದರು. ಆಗ ಅವರಿಗೆ ಈ ಆಸ್ತಿಗಳು ಬಂದಿರುತ್ತವೆ. ಯಾವ ವರ್ಷದಲ್ಲಿ ಭಾಗವಾಗಿರುತ್ತದೆ ಎಂದರೆ ಸಾಕ್ಷಿ ನಾನು ಆಗ ಹುಟ್ಟಿರುವುದಿಲ್ಲ, ಆದ್ದರಿಂದ ನನಗೆ ಗೊತ್ತಿಲ್ಲ. ವಿಭಾಗವಾದ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ. ನಾನು ಆ ಸಮಯದಲ್ಲಿ ಹುಟ್ಟಿರಲಿಲ್ಲ. ನಿಮ್ಮ ತಂದೆಗೆ ಸೇರಿತ್ತು ಎಂದು ಹೇಳಿದ್ದು ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

ಲಿಖಿತ ತಕರಾರನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಾನು ಯಾವುದೇ ತಕರಾರು ಹಾಕಿರುವುದಿಲ್ಲ. ಕರಿಗೌಡ ನನ್ನ ಮೇಲೆ ದಾವೆಯನ್ನು ಹೂಡಿರುತ್ತಾರೆ. ನೀವು ನಿಮ್ಮ ಮುಖ್ಯವಿಚಾರಣಾ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿಲ್ಲ. ನೀವು ಮತ್ತು ವಾದಿ ಚಿಕ್ಕವರಿದ್ದಾಗ ನಿಮ್ಮ ತಂದೆ ತೀರಿಕೊಂಡಿದ್ದರು ಎಂದರೆ ಸರಿ. ನಿಮ್ಮ ತಂದೆ ತೀರಿಕೊಂಡ ನಂತರ ವಾದಿ ಬೇರೆಯಾಗಿದ್ದರು, ನಿಮ್ಮ ತಾಯಿ ನಿಮ್ಮೊಂದಿಗೆ ವಾಸವಾಗಿದ್ದರು ಎಂದರೆ ಸಾಕ್ಷಿ ನಾವು ಎಲ್ಲರೂ ಜೊತೆಗೆ ವಾಸವಾಗಿದ್ದೆವು ಎಂದು ಉತ್ತರಿಸುತ್ತಾರೆ. ನಾವು ಜೊತೆಗೆ ವಾಸವಾಗಿದ್ದ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ನೀವು ನಿಮಗೆ ಸಾಗುವಳಿ ಮೂಲಕ ಬಂದಿರುವ 2 ಎಕರೆ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದೀರಿ ಎಂದರೆ ಸರಿ. ಸಾಕ್ಷಿ ಮುಂದುವರಿದು 4 ಎಕರೆ ಜಮೀನಿನಲ್ಲಿ ವಾದಿ ಉಳುಮೆ ಮಾಡುತ್ತಿದ್ದಾರೆ ಎಂದು ಉತ್ತರಿಸುತ್ತಾರೆ. ವಾದಿ 4 ಎಕರೆ ಜಮೀನಿನಲ್ಲಿ ಉಳುಮೆ ಮಾಡಿ ಬಂದ

ಆದಾಯದಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ 66 ವರ್ಷ ವಯಸ್ಸಾಗಿರುತ್ತದೆ. ವಾದಿ ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದು ಅಂದಿನಿಂದಲೂ ಇಲ್ಲಿಯವರೆಗೂ ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ಹಾಗೂ ವಾದಿಯ ಮಧ್ಯೆ ವಿಭಾಗ ಆಗಿತ್ತು ಎಂದು ಹೇಳಿದ್ದು ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ವಿಭಾಗವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಿಭಾಗವಾಗುವ ಸಮಯದಲ್ಲಿ ನನ್ನನ್ನು ಮತ್ತು ವಾದಿಯನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ವಿಭಾಗವಾಗುವ ಸಮಯದಲ್ಲಿ ನನಗೆ ಸುಮಾರು 47 ವರ್ಷ ವಯಸ್ಸಾಗಿತ್ತು. ವಿಭಾಗವಾಗುವ ಸಮಯದಲ್ಲಿ ವಾದಿಯ ಹೆಸರಿನಲ್ಲಿ ಖಾತೆ ಇತ್ತು. ನೀವು ವಿಭಾಗವಾಗಿದೆ ಎಂದು ಹೇಳಿದ್ದು ನೀವು ಹೇಳುವ ಹಾಗೆ ವಿಭಾಗವಾಗಿದ್ದರೆ ನೀವು ಖಾತೆ ವರ್ಗಾವಣೆ ಮಾಡಿಸಿಕೊಂಡಿದ್ದೀರಾ ಎಂದರೆ ಮಾಡಿಸಿಕೊಂಡಿರುವುದಿಲ್ಲ. ನಿಡಿ1 ಕ್ಕೆ ವಾದಿಯ ಮಕ್ಕಳನ್ನು ಕರೆಸಿ ಸಹಿ ಪಡೆಯಬಹುದಿತ್ತಲ್ಲಾ ಎಂದರೆ ಪಡೆದಿರುವುದಿಲ್ಲ. ವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನೀವು ವಾದಿಯನ್ನು ಕರೆದುಕೊಂಡು ಹೋಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ವಾದಿಗೆ ನಿಡಿ1 ನ್ನು ಬರೆಸಿಕೊಡುವ ಯಾವುದೇ ಉದ್ದೇಶ ಇರಲಿಲ್ಲ ಹಾಗೂ ಅವರಿಗೆ ಬರೆದುಕೊಡಲು ಸಂಪೂರ್ಣ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ವಾದಿಯೇ ದಾವಾಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿ ನಿಮಗೆ ನಿಡಿ1 ನ್ನು ನೀಡಿರಬಹುದು, ಆದರೆ ಅದರ ಆಧಾರದ ಮೇಲೆ ನಿಮಗೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಒಂದನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.